# ದಾಖಲೆಯ ಹಳೆಯ ಪಾಸ್‌ಪೋರ್ಟ್

ನಮ್ಮ ಮನೆಯಲ್ಲಿ ಅತ್ಯಂತ ಹಳೆಯ ವಸ್ತು ಯಾವುದೆಂದರೆ ಅದು ನನ್ನ ತಾತನವರ ಪಾಸ್‌ಪೋರ್ಟ್. ಇದನ್ನು ಅವರು 1931ನೇ ಇಸವಿಯಲ್ಲಿ ಮದ್ರಾಸ್‌ನಲ್ಲಿ (ಈಗಿನ ಚೆನ್ನೈ) ಪಡೆದುಕೊಂಡಿದ್ದರು. ಇದರ ಮೂಲಕ ಅವರು ಇಡೀ ಭೂಮಂಡಲವನ್ನು ಪ್ರದಕ್ಷಿಣೆ ಮಾಡಿ ಬಂದರು. ಈ ದಾಖಲೆಯನ್ನು ಲಿಮ್ಕಾ ಬುಕ್ ಆಫ್ ರೆಕಾರ್ಡ್ಸ್ 2016ರಲ್ಲಿ ಉಲ್ಲೇಖಿಸಲಾಗಿದೆ. ಸ್ವಾತಂತ್ರ್ಯ ಪೂರ್ವ ಕಾಲದಲ್ಲಿ ಅವರನ್ನು ಬ್ರಿಟಿಷ್ ಸರ್ಕಾರದಿಂದ ರಕ್ಷಿಸಲ್ಪಟ್ಟ ವ್ಯಕ್ತಿ ಮತ್ತು ಭಾರತದ ಮೈಸೂರು ರಾಜ್ಯದ ಪ್ರಜೆ ಎಂದು ಗುರುತಿಸಿದ್ದರು.

**-ಡಿ.ಎನ್.ಶಾಲಿನಿ, ತುಮಕೂರು**






# ಏಕಕಾಷ್ಠದ ಅಗರಬತ್ತಿ ಕೊಳವೆ

ಇದು ಒಂದೇ ಮರದ ತುಂಡನ್ನು ದುಂಡನೆ ಕೊರೆದು ಮಾಡಿದ ಅಗರಬತ್ತಿ ಕೊಳವೆ. ಸುಮಾರು ನೂರು ವರ್ಷಗಳಿಗೂ ಹಿಂದಿನದು. ಅಷ್ಟು ಹಳೆಯದಾಗಿದ್ದರಿಂದ ಕೈಯಲ್ಲಿಯೇ ಮಾಡಿರುವುದೆಂದು ಊಹಿಸಬಹುದು. ಕರಾರುವಾಕ್ಕಾಗಿ ಕೊರೆದಿರುವ ಕೊಳವೆ ಮತ್ತು ಮುಚ್ಚಳ ಕಲಾಕಾರನ ನೈಪುಣ್ಯವನ್ನು ತೋರಿಸುತ್ತದೆ. ಈ ಮರದ ಅಗರಬತ್ತಿ ಕೊಳವೆ ಕೊಪ್ಪ ತಾಲ್ಲೂಕಿನ ಹಾಲ್ಮುತ್ತೂರಿನ ಯಜಮಾನ್ ಸೀತಾರಾಮ ಭಟ್ಟರ ಮನೆಯಲ್ಲಿ ಇದೆ. ಅವರ ತಾತನ ಕಾಲದಲ್ಲಿ ಇದನ್ನೇ ಉಪಯೋಗಿಸುತ್ತಿದ್ದರು. ಕಾಲಾಂತರದಲ್ಲಿ ಅಗರಬತ್ತಿಯ ಉದ್ದ ಕೊಳವೆಗಿಂತ ಹೆಚ್ಚಾಗಿದ್ದರಿಂದ ಹಾಗೆಯೇ ಎತ್ತಿಟ್ಟಿದ್ದಾರೆ.

**– ಶ್ರೀಲತಾ ರಮೇಶ್, ಬೆಂಗಳೂರು**

# ಮಲ್ಲಿಕಾರ್ಜುನ ಮನಸೂರರ ತಂಬೂರಿ

ಧಾರವಾಡದ ಆಕಾಶವಾಣಿ ಕೇಂದ್ರದ ಎದುರಿಗಿರುವ ಶೇಕ್ ಕಂಪೌಂಡ್ ಬಡಾವಣೆಯಲ್ಲಿ ಖ್ಯಾತ ಹಿಂದೂಸ್ತಾನಿ ಗಾಯಕರಾಗಿದ್ದ ದಿ. ಮಲ್ಲಿಕಾರ್ಜುನ ಮನಸೂರ ವಾಸವಾಗಿದ್ದ ಮನೆ ಇದೆ. ಈಗ ಮನೆಯನ್ನು ಸ್ಮಾರಕ ಮಾಡಲಾಗಿದೆ. ಅಲ್ಲಿ ಅವರು ಬಳಸುತ್ತಿದ್ದ ವಾದ್ಯಗಳು, ಭಾವಚಿತ್ರಗಳು, ಧರಿಸುತ್ತಿದ್ದ ವಸ್ತ್ರಗಳು, ಪಾರಿತೋಷಕಗಳು ಇತ್ಯಾದಿ ವಸ್ತುಗಳನ್ನು ನೋಡುಗರ ಪ್ರದರ್ಶನಕ್ಕಿರಿಸಲಾಗಿದೆ. ಸ್ಮಾರಕ ಪ್ರವೇಶ ಮಾಡಿದ ಕೂಡಲೇ ಬಹಳ ಜಾಗರೂಕತೆಯಿಂದ ಕಾಯ್ದಿರಿಸಲ್ಪಟ್ಟ ಮನಸೂರರು ಬಳಸುತ್ತಿದ್ದ ತಂಬೂರಿ ಎಲ್ಲರ ಗಮನ ಸೆಳೆಯುತ್ತದೆ.

ಈ ತಂಬೂರಿ ಅವರಿಗೆ ಅವರ ಗುರುಗಳಾದ ಸಂಗೀತ ಸಾಮ್ರಾಟ ಅಲ್ಲಾದಿಯಾಖಾನ್ (ಗುಲಾಮ ಅಹಮ್ಮದ್ ಖಾನ) ಅವರ ಪುತ್ರ ಉಸ್ತಾದ ಮಂಜೀಖಾನ್ ಇವರಿಂದ ಬಳುವಳಿಯಾಗಿ ಬಂದದ್ದು ಎಂದು ಹೇಳಲಾಗುತ್ತದೆ. ಮನಸೂರರು ಖಯಾಲ ಶೈಲಿಯಲ್ಲಿ ಹಾಡುವುದನ್ನು ಕರಗತ ಮಾಡಿಕೊಂಡಿದ್ದರು, ಜಯಪುರ ಘರಾನೆಯನ್ನು ಅಲ್ಲಾದಿಯಾ ಘರಾನೆ ಎಂತಲೂ ಕರೆಯುವುದುಂಟು. ಮಲ್ಲಿಕಾರ್ಜುನ ಮನಸೂರರು ಗ್ವಾಲಿಯರ್ ಮತ್ತು ಜಯಪುರ ಘರಾನೆ ಶೈಲಿಯಲ್ಲಿ ಹಾಡಬಲ್ಲವರಾಗಿದ್ದರು. ಅವರ ಜನ್ಮದಿನವಾದ ಡಿಸೆಂಬರ್ 31ರಂದು ಮತ್ತು ಲಿಂಗೈಕ್ಯರಾದ ಸೆಪ್ಟೆಂಬರ್ 12ರಂದು ಈ ಸ್ಥಳದಲ್ಲಿ ಪೂಜೆ ಸಲ್ಲಿಸಿ ಗಾಯನ ಸೇವೆ ಸಲ್ಲಿಸಲಾಗುತ್ತದೆ.

**– ಪಂಪಾಪತಿ ಹಿರೇಮಠ, ಧಾರವಾಡ**

